ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 19.

ಬೆಂಗಳೂರು, ಗುರುವಾರ, ಮೇ ತಾ॥ 13, ಸ॥ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತ.

ವಿಷಯ-ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ಮತ್ತು ಇನಾಂ ಸೂಪರ್‌ಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟ್ಟು, ರಜಿಸ್ಟ್ರೇರ್ಸ ಮತ್ತು ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್‌ಟೆಂಡೆಂಟರು ಫಾರೆಸ್ಟ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷ್‌ನಗಳು ಮತ್ತು ಅವುಗಳಿಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 19ನೆ ಏಪ್ರೆಲ್ 1909.

ನಂ. 10305—ಸ್ಯಾನಿಟೇರಿ 76-08-48, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ನ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ಕರಿಯನಕಟ್ಟೆ	...	...	...	ಚಾಮರಾಜನಗರ
ಕಸ್ತೂರು	...	...	....	ಡಿಟೋ
ಬಡಗಲಪುರ	...	...	....	ಡಿಟೋ
ಚಿಕ್ಕೋನಹಳ್ಳಿ	...	...	...	ಕೃಷ್ಣರಾಜಪೇಟೆ
ದೊಡ್ಡಹೊಮ್ಮ	...	....	...	ನಂಜನಗೂಡು

ತಾರೀಖು 23ನೆ ಏಪ್ರಿಲ್ 1909.

ನಂ. 10460—ಸ್ಯಾನಿಟರಿ 14-08-26, ಸಮಸ್ತ ಜನರ ತಿಳಿವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳಿಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಕಿತ್ತನಕೆರೆ	...	...	...	ಹಾಸನ
ಗ್ರಾಮ	...	...	...	ಡಿಟೋ
ಹೊಸಹಳ್ಳಿ	...	...	...	ಡಿಟೋ
ಸೀಗೆ	...	...	...	ಡಿಟೋ
ಪುರ	...	...	...	ಡಿಟೋ
ತಿಮ್ಮನಹಳ್ಳಿ	...	...	...	ಡಿಟೋ
ಕಾಲತಿಮ್ಮನಹಳ್ಳಿ	...	...	...	ಡಿಟೋ
ಉದ್ದೂರು	...	...	...	ಡಿಟೋ
ಸೋಮನಹಳ್ಳಿ	...	...	...	ಡಿಟೋ
ಹೊನ್ನೇನಹಳ್ಳಿ	...	...	...	ಡಿಟೋ
ಕೊಂಡಜ್ಜಿ	...	...	...	ಡಿಟೋ
ಮೇಲಗೋಡನಹಳ್ಳಿ	...	...	...	ಡಿಟೋ
ವೈಲನಹಳ್ಳಿ	...	...	...	ಡಿಟೋ
ಬೇಲೂರು	...	...	...	ಬೇಲೂರು
ಜವಗಲ್	...	...	...	ಅರಸೀಕೆರೆ.
ಜಕ್ಕನಹಳ್ಳಿ	...	...	...	ಡಿಟೋ
ಅಗ್ಗೆಂಡ	...	...	...	ಡಿಟೋ
ಹೊಸಹಳ್ಳಿ	..	...	...	ಡಿಟೋ
ಕರಿಕೆರೆ	...	...	...	ಡಿಟೋ
ಚನ್ನರಾಯಪಟ್ಟಣ(ಹೊಲಗೆರೆ)	...	...	...	ಚನ್ನರಾಯಪಟ್ಟಣ
ಮಲ್ಲೇನಹಳ್ಳಿ	...	...	...	ಡಿಟೋ
ಚಲುವಗಾಲ	...	...	...	ಡಿಟೋ
ದೇವಸ್ಥಾನದ ಕಾಲೇನಹಳ್ಳಿ	...	...	...	ಡಿಟೋ
ನಂಬಿಹಳ್ಳಿ	...	...	...	ಡಿಟೋ

ತಾರೀಖು 1ನೆ ಮೇ 1909.

ನಂ. ಜ. 6223—ಜ. ವಿ. 254-08-8, 1909ನೆ ಇಸವಿ ಏಪ್ರಿಲ್ 14ನೆ ಮರ್ತ್ಯಂನ ಜ. 5825—ಜ. ವಿ. 254-08-6ನೆ ನಂಬರ್ ಇಸ್ತಿಹಾರ್ನಾವೆಯಲ್ಲಿ ಗವರ್ನಮೆಂಟ್ ಪ್ರೆಸ್, ಸ್ಟೇಷನೆರಿ, ಮತ್ತು ಸ್ಟ್ಯಾಂಪು ಕಾರಖಾನೆಯ ಸೂಪರಿಂಟೆಂಡೆಂಟರಾದ ಮಿ|| ಸಿ. ಎಚ್. ಪಟ್ಸ್‌ರವರಿಗೆ ಮಂಜೂರಾ ಡಿದ್ದ ಆರುವಾರಗಳ ಪ್ರಿವಿಲೀಜು ರಜಾ ಸೇರಿ, ಒಟ್ಟು ಎರಡು ತಿಂಗಳು ಮತ್ತು 18 ದಿವಸಗಳ ರಜಾ ಆಗುವಂತೆ ಮೊದಲು ಕೊಟ್ಟಿದ್ದ ರಜಾವನ್ನು ಬಡಾಯಿಸಿರುತ್ತೆ.

2. ಮಿ|| ಪಟ್ಸ್‌ರವರು ರಜಾದ ಮೇಲೆ ಗೈರು ಹಾಜರಾಗಿರುವ ಕಾಲದಲ್ಲಿ ಮೇಲ್ಕಂಡ ಇಸ್ತಿಹಾರ್ನಾವೆಯಲ್ಲಿ ಮಂಜೂರಾದ ಏರ್ಪಾಟೇ ಜಾರಿಯಲ್ಲಿರಬೇಕು.

ತಾರೀಖು 4ನೆ ಮೇ 1909.

ನಂ. 10900—ಲೋ. ಬೋ. 364-08-2, ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿ ಯೂನಿಯರ್ಡ್ ಪಂಚಾಯಿತದಾರಿಗೆ ರಾಜಿನಾಮೆ ಕೊಟ್ಟ ಮಿ|| ರಾಮಶಾಸ್ತ್ರಿಗಳಿಗೆ ಬದಲಾಗಿ, ಕನ್ನಡ ಪಾಠಶಾಲೆಯ ಹೆಡ್ಮಾಸ್ಟರ್ ಮಿ|| ರಾಮಕೃಷ್ಣಯ್ಯನವರನ್ನು ಸದರಿ ಸ್ಥಾನಕ್ಕೆ ನೇಮಕಮಾಡಿ ಇರುತ್ತೆ.

ತಾರೀಖು 5ನೆ ಮೇ 1909.

ನಂ. ಜ. 6319—ಜ. ವಿ. 52-08-11, 1872ನೆ ಇಸವಿಯ ಇಂಡಿಯರ್ಡ್ ಕ್ರೈಸ್ತರ ವಿವಾಹದ ಆಕ್ಟಿನ 6 ಮತ್ತು 9ನೆ ಪ್ರಕರಣಗಳ ಮೇರಿಗೆ, ಮೈಸೂರಿಗೆ ಅನ್ವಯಿಸಬಹುದಾದ ಸದರಿ ಆಕ್ಟು 6ನೆ ಪ್ರಕರಣದ ಪ್ರಕಾರ ವಿವಾಹಗಳನ್ನು ನಡಿಸುವ ವಿಷಯದಲ್ಲಿಯೂ ಮತ್ತು 9ನೆ ಪ್ರಕರಣ ಪ್ರಕಾರ ಸರಟಫಿಕೇಟುಗಳನ್ನು ಕೊಡುವ ವಿಷಯದಲ್ಲಿಯೂ, 1907ನೆ ಇಸವಿ ಡಿಸೆಂಬರ್ 7ನೆ ತಾರೀಖಿನ ಜ. 3342—ಜ. ವಿ. 65-07—6ನೆ ನಂಬರ್ ಇಸ್ತಿಹಾರ್ನಾವೆಯಲ್ಲಿ, ಮೈಸೂರಲ್ಲಿರುವ ವೆಸ್ಲಿಯರ್ಡ್ ಮಿಷನ್‌ಗೆ ಸಂಬಂಧಪಟ್ಟ ರೆವರೆಂಡ್ ಹೆನ್ರಿ ಮೂರಿಟ್ಟ್‌ರವರಿಗೆ ಕೊಡಲ್ಪಟ್ಟ ಲೈಸೆನ್ಸನ್ನು ಈ ಮೂಲಕ ರದ್ದುಮಾಡಿ ಇರುತ್ತದೆ.

ತಾರೀಖು 8ನೆ ಮೇ 1909.

ನಂ. 11119—ಲೋ. ಬೋ. 11-08-4, ಡಾಕ್ಟರ್ ಟಿ. ಜೆ. ಒಡಾನಲ್ ಮತ್ತು ಮಿ|| ಆರ್. ಹೆಚ್. ಪಿ. ಬುರ್ಕ್‌ರವರು ರಜಾದ ಮೇಲೆ ಗೈರು ಹಾಜರಾಗಿರುವ ಕಾಲದಲ್ಲಿ, ಇವರಿಗೆ ಬದಲಾಗಿ ಡಾಕ್ಟರ್ ಜೆ. ಡಿ. ಒಡಾನಲ್ ಮತ್ತು ಮಿ|| ಸಿ. ಬಿ. ಜಿನೆಟ್ಸ್ ಎಂಬುವರನ್ನು ಕೋಲಾರದ ಚಿನ್ನದ ಗಣಿ ಸ್ಯಾನಿಟರಿ ಬೋರ್ಡಿನ ಸರ್ಕಾರಿ ಉದ್ಯೋಗಸ್ಥರಲ್ಲದ ಹಂಗಾಮಿ ಮೆಂಬರುಗಳನ್ನಾಗಿ ಮೈನಿಂಗ್ ಬೋರ್ಡಿನವರು ಚುನಾಯಿಸಿರುವದನ್ನು ಮಂಜೂರ್ಮಾಡಿರುತ್ತೆ.

ತಾರೀಖು 12ನೆ ಮೇ 1909.

ನಂ. ಜು. 3488—ಪೋಲೀಸ್. 44-08-9, 1909ನೆ ಏಪ್ರಿಲ್ 20ನೆ ಮರ್ತ್ಯಂ ಜು. 3221—ಪೋ. 44-08-7ನೆ ನಂಬರ್ ಬಾಬತು ಸರ್ಕಾರೀ ಇಸ್ತಿಹಾರ್‌ನಾವೆಯಲ್ಲಿ ಕಡೂರು ಡಿಸ್ಟ್ರಿಕ್ಟು ಪೊಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಮಿ|| ಟಿ. ಎಫ್. ವಿಲ್ಕಿನ್ಸ್ ಯವರಿಗೆ ಕೊಟ್ಟ ಹತ್ತು ದಿವಸಗಳ ಪ್ರಿವಿಲೇಜ್ ರಜಾವಿನ ಜತಗೆ ಐದು ದಿವಸಗಳ ಪ್ರಿವಿಲೇಜ್ ರಜಾ ಹೆಚ್ಚಾಗಿ ಕೊಟ್ಟಿರುತ್ತದೆ.

ತಾರೀಖು 28ನೆ ಏಪ್ರಿಲ್ 1909.

ನಂ. ಫೈ. 704—ಸೆ ರೆ. 57-07—11, 1878ನೆ ಇನವಿಯು 1ನೆ ನಂಬರ್ ಓಪಿಯಂ ಆಕ್ಟಿನ 5ನೆ ಪ್ರಕರಣದಿಂದ ಕೊಡೋಣಾದ ಅಧಿಕಾರಗಳನ್ನು ಜಲಾಯಿಸುವಲ್ಲಿ 19ನೆ ಮೇ 1900ರ 8198—ಎಕ್ಸೈಜು 21—9ನೆ ಇಸ್ತಿಹಾರ್ನಮೆಯ ಜತೆಗೆ ಶ್ರೀಮರ್ ಮೈಸೂರು ಮಹಾರಾಜ ರಾಜಾಸಾಹೇಬ್ಬಹದ್ದೂರ್‌ರವರ ಸರ್ಕಾರದವರು, ಆಫೀಮನ್ನೂ ಮತ್ತು ಆಫೀಮಿನಿಂದ ತಯಾರಾಗಿ ಹೊಗೇಸುತ್ತಿಗಾಗಿ ಅಲ್ಲದೆ ಇತರ ವಿಧವಾಗಿ ಉಪಯೋಗಿಸಲ್ಪಡುವ ಮಾದಕ ದ್ರವ್ಯಗಳನ್ನು ಬ್ರಿಟಿಷ್ ಪ್ರಾಂತ್ಯಗಳ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಮೈಸೂರು ಸೀಮೆಯ ಮುಖಾಂತರ ಸಾಗಿಸುವಲ್ಲಿ ಅವುಗಳ ಆಮದು, ಸಾಗಿಸುವಿಕೆ, ಮತ್ತು ರಫ್ತು ಇವುಗಳನ್ನು ಕ್ರಮಪಡಿಸಲು ಈ ಕೆಳಗೆ ಕಾಣಿಸಿರುವ ಹೆಚ್ಚು ನಿಬಂಧನೆಗಳನ್ನು ಸಾದರ್ಪಡಿಸಲು ಹುಕುಂ ದಯ ಪಾಲಿಸಿರುತ್ತಾರೆ.

ನಿಬಂಧನೆಗಳು.

1. ಆಫೀಮಿನಿಂದ ತಯಾರಾಗಿ ಹೊಗೇ ಸುತ್ತು ಸೇದುವುದಕ್ಕೋಸ್ಕರ ಉಪಯೋಗಿಸಲ್ಪಡುವ ಮಾದಕ ಪದಾರ್ಥಗಳನ್ನು ಹೊರಗಿನ ಪ್ರಾಂತ್ಯಗಳಿಂದ ಮೈಸೂರು ಸೀಮೆಯ ಮುಖಾಂತರ ಸಾಗಿಸಕೂಡದೆಂದು ಖಂಡಿತವಾಗಿ ನಿಷೇಧಿಸಿರುತ್ತದೆ.

2. ಈ ಕೆಳಗೆ ನಮೂದಿರುವ ನಿಬಂಧನೆಗಳ ಪ್ರಕಾರ ಕೊಡುವ ರಹದಾರಿಯು ಮೇರೆಗೆ ಮತ್ತು ಅದಕ್ಕನುಸಾರವಾಗಿ ವಿನಹಾ, ಯಾವ ಆಫೀಮನ್ನಾಗಲಿ ಅಥವಾ ಹೊಗೇಸುತ್ತು ತಗಿಯುವುದಕ್ಕೆ ಉಪಯೋಗಿಸಲ್ಪಡತಕ್ಕ ವುಗಳ ಹೊರ್ತು ಆಫೀಮಿನಿಂದ ತಯಾರ್ಮಾಡಲ್ಪಟ್ಟ ಯಾವ ಮಾದಕ ಪದಾರ್ಥಗಳನ್ನಾಗಲಿ ಮೈಸೂರು ಸೀಮೆಯ ಮುಖಾಂತರ ಸಾಗಿಸಕೂಡದು.

3. ಬ್ರಿಟಿಷ್ ಪ್ರಾಂತ್ಯಗಳಲ್ಲಿ ಮಾರಲು ಅಪ್ಪಣೆ ಪಡೆದಿರುವವರಿಗೆ ಕೊಟ್ಟಿರುವ ರಹದಾರಿಗಳ ವಿಷಯದಲ್ಲಿ ವಿನಹಾ, ಮತ್ತ್ಯಾವ ರಹದಾರಿಗಳಲ್ಲಿಯೂ 3 ತೊಲ ಆಫೀಮಿಗಿಂತ ಜಾಸ್ತಿಯಾಗಲಿ ಅಥವಾ ಹೊಗೇಸುತ್ತು ತಗಿಯುವುದಕ್ಕೆ ಉಪಯೋಗಿಸಲ್ಪಡತಕ್ಕವುಗಳ ಹೊರ್ತು ಆಫೀಮಿನಿಂದ ತಯಾರಾದ 3 ತೊಲ ಮಾದಕ ದ್ರವ್ಯಗಳಿಗಿಂತ ಜಾಸ್ತಿಯಾಗಿ ಯಾಗಲಿ ಸಾಗಿಸಕೂಡದು.

4. ಈ ನಿಬಂಧನೆಗಳ ಪ್ರಕಾರ ಕೊಡತಕ್ಕ ರಹದಾರಿಗಳು ಅಚ್ಚು ಹಾಕಿದ ನಮೂನೆಯಲ್ಲಿದ್ದೂ ದ್ವಿಪ್ರತಿಯಲ್ಲಿಯೂ ಇರತಕ್ಕದ್ದು. ಒಂದೊಂದು ರಹದಾರಿಗೂ ವರಿಸೆಯಾಗಿ ನಂಬರು ಹಾಕಿರಬೇಕಲ್ಲದೆ ಸದರಿ ರಹದಾರಿಗಳ ಮೇಲೆ ಕೊಡತಕ್ಕ ಆಫೀಸರನ ಖಾಸಗಿ ಮುದ್ರೆಯೂ ಮತ್ತು ತನ್ನ ಆಫೀಸು ಮುದ್ರೆಯೂ ಒತ್ತಿರಬೇಕು

5. ಒಂದು ರಹದಾರಿಯು ಜಾರಿಯಲ್ಲಿರಬೇಕಾದ ಅವಧಿಯನ್ನು ಆಯಾ ಪದಾರ್ಥವು ಸಾಗಿಸಲ ಡಬೇಕಾದ ಸ್ಥಳ ಎಷ್ಟು ದೂರವಿದೆಯೋ ಅದರ ಮೇಲೆ ಕ್ರಮಪಡಿಸಿ ನಿರ್ಣಯಿಸತಕ್ಕದ್ದಾಗಿದೆ ; ಹ್ಯಾಗಂದರೆ ರಸ್ತೆ ಮೇಲೆ ಸಾಗಿಸಬೇಕಾದರೆ 15 ಮೈಲಿಗಳಿಗೆ ಒಂದೊಂದು ದಿವಸದಂತೆಯೂ ರೈಲು ಮೇಲೆ ಸಾಗಿಸಬೇಕಾದರೆ ರವಾನೆಗೆ ಒಂದು ದಿವಸವೂ, ಯಾರಿಗೆ ಒಪ್ಪಿಸಬೇಕೋ ಅವರ ವಶಕ್ಕೆ ಕೊಡುವುದಕ್ಕೆ ಒಂದು ದಿವಸವೂ ಈರೀತಿ ಬಿಟ್ಟು 70 ಮೈಲಿಗೆ ಒಂದೊಂದು ದಿವಸದಂತೆಯೂ ಜಾರಿಯಲ್ಲಿರತಕ್ಕದ್ದು.

6. ಈ ನಿಬಂಧನೆಗಳ ಮೇರೆಗೆ ಮೈಸೂರು ಸೀಮೆಯ ಮುಖಾಂತರ ಸಾಗಿಸಲ್ಪಟ್ಟ ಪ್ರತಿಯೊಂದು ಪದಾರ್ಥದ ಜತೆಯಲ್ಲಿಯೂ ಆಯಾ ಪದಾರ್ಥಕ್ಕೆ ಸಂಬಂಧಪಟ್ಟ ರಹದಾರಿಯು ಇರಬೇಕು. ಈ ರಹದಾರಿಯಲ್ಲಿ ಸಾಗಿಸುವವನ ಹೆಸರು, ಎಷ್ಟು ಆಫೀಮು ಯಾ ಮಾದಕ ಪದಾರ್ಥ ಸಾಗಿಸಿದೆ, ಸಾಗಿಸತಕ್ಕ ಮಾರ್ಗ ಸದರಿ ರಹದಾರಿಯು ಎಷ್ಟು ಕಾಲ ಜಾರಿಯಲ್ಲಿರಬೇಕು, ಮತ್ತು ಅದನ್ನು ಯಾವ ಆಫೀಸರಲ್ಲಿ ತಾಳೆ ನೋಡುವ ಬಗ್ಗೆ ತಗೆದುಕೊಂಡು ಹೋಗಬೇಕು, ಎಂಬೀ ವಿವರಗಳನ್ನು ಕಾಣಿಸಿ ಇರಬೇಕು.

7. ರಹದಾರಿಯನ್ನು ಕೊಡುವಾಗಲೆಲ್ಲಾ, ಅಸಲ್ ರಹದಾರಿಗೂ ಸಾಮಾನಿಗೂ ಒತ್ತುವಂಥಾ ಮುದ್ರೆಯನ್ನೇ ದ್ವಿಪ್ರತಿಗೂ ಒತ್ತಿ, ಅದನ್ನು ಕೊಡುವ ಆಫೀಸರರು ಸಾಮಾನನ್ನು ತಾಳೆ ನೋಡಿಕೊಳ್ಳುವದಕ್ಕಾಗಿ ನೇಮಿಸಲ್ಪಟ್ಟ ಆಫೀಸರರಿಗೆ ಕಳುಹಿಸಬೇಕು.

8. ಈ ರೆಗ್ಯುಲೇಷನ್‌ಗಳ ಪ್ರಕಾರ ಮೈಸೂರು ಸೀಮೆಯ ಮೂಲಕ ರವಾನಿಸಲ್ಪಡುವ ಪ್ರತಿ ಸಾಮಾನು ಮೂಟೆಗೂ ಮುದ್ರೆ ಒತ್ತಬೇಕು ; ರಹದಾರಿಯ ಮೇಲೆ ಯಾವ ಮುದ್ರೆಯನ್ನು ಒತ್ತಿರುತ್ತೆಯೋ ಅದೇ ಮುದ್ರೆಯನ್ನೇ ಉಪಯೋಗಿಸಬೇಕು (4ನೆ ನಿಬಂಧನೆಯನ್ನು ನೋಡಿ).

9. ಈ ನಿಬಂಧನೆಗಳ ಪ್ರಕಾರ ರವಾನಿಸಲ್ಪಡುವ ರಹದಾರಿಗಳು ಈ ಬಗ್ಗಾಗಿಯೇ ಹೆಸರು ಅಥವಾ ಹುದ್ದೆಯ ನಮೂದಿನಿಂದ ಯಾವ ಸೀಮೆಯಲ್ಲಿ ತನ್ನ ಅಧಿಕಾರಗಳನ್ನು ಜಲಾಯಿಸುತ್ತಾರೆಯೋ ಅಂಥಾ ಸೀಮೆಯ ಮುಖ್ಯ ಎಕ್ಸೈಜು ಆಫೀಸರರಿಂದ ನೇಮಕವಾಗಿರುವ ಅಧಿಕಾರಿಗಳಿಂದ ಕೊಡಲ್ಪಟ್ಟ ಹೊರ್ತು ಸದರಿ ರಹದಾರಿಗಳನ್ನು ಅಂಗೀಕರಿಸಕೂಡದು.

10. ಉದ್ದೇಶಿಸಲ್ಪಟ್ಟ ಸ್ಥಳಕ್ಕೆ ಪ್ರತಿ ಸಾಮಾನು ತಲಬದ್ ಕೂಡಲೆ, ಯಾವ ಸೀಮೆಗೆ ಸಾಮಾನು ಸಾಗಿಸಲ್ಪಡುತ್ತದೆಯೋ ಅಂಥಾ ಸೀಮೆಯ ಮುಖ್ಯ ಎಕ್ಸೈಜು ಆಫೀಸರರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡುವ ಆಫಿಸರು ಸದರಿ ಸಾಮಾನನ್ನು ಅಜಮಾಯಿಷಿಮಾಡಿ ತಾಳೆ ನೋಡತಕ್ಕದ್ದು.

11. ಮೇಲ್ಕಂಡ 9ನೆ ನಿಬಂಧನೆಯ ಮೇರಿಗೆ ರಹದಾರಿಗಳನ್ನು ಕೊಡುವದಕ್ಕಾಗಿ ನೇಮಿಸಲ್ಪಟ್ಟ ಅಥವಾ ಅಧಿಕಾರಕೊಡಲ್ಪಟ್ಟ ಪ್ರತಿ ಒಬ್ಬ ಆಫೀಸರಿಗೂ, 10ನೆ ನಿಬಂಧನೆ ಪ್ರಕಾರ ಸಾಮಾನುಗಳನ್ನು ತಾಳೆ ನೋಡುವದಕ್ಕಾಗಿ ಅಧಿಕಾರ ಕೊಡಲ್ಪಟ್ಟ ತಮಾಂ ಆಫೀಸರುಗಳ ಹೆಸರು ಮತ್ತು ಹುದ್ದೆಯನ್ನು ತಿಳಿಸುತ್ತಾ ಬರಬೇಕು.

12. ರಹದಾರಿಗಳನ್ನು ಕೊಡುವದಕ್ಕಾಗಿಯೂ ಮತ್ತು ಸಾಮಾನುಗಳನ್ನು ತಾಳೆ ನೋಡಿಕೊಳ್ಳುವುದಕ್ಕಾಗಿಯೂ ನೇಮಿಸಲ್ಪಟ್ಟ ತಮಾಂ ಆಫೀಸರುಗಳ ಹೆಸರುಗಳನ್ನು ಮತ್ತು ಹುದ್ದೆಗಳನ್ನು ಬ್ರಿಟಿಷ್ ರಾಜ್ಯದ ಸರಹದ್ದಿನಲ್ಲಿರುವ ಡಿಸ್ಟ್ರಿಕ್ಟಿನ ಎಕ್ಸೈಜು ಇಲಾಖೆಯ ಡೆಪ್ಯೂಟಿ ಕಮಿಷನರವರಿಗೆ ತಿಳಿಸಬೇಕು.

13. ಮೇಲ್ಕಂಡ 9ನೆ ನಿಬಂಧನೆಯ ಮೇರಿಗೆ ರಹದಾರಿಗಳನ್ನು ಕೊಡುವ ಆಫೀಸರರು, ಯಾವ ರೇಂಜು ಮೂಲಕ ಸಾಮಾನುಗಳು ಸಾಗಿಸಲ್ಪಡುತ್ತವೆಯೋ ಅಂಥಾ ರೇಂಜಿನ ಇನ್‌ಸ್ಪೆಕ್ಟರಿಗೆ, ಕೊಡಲ್ಪಟ್ಟ ರಹದಾರಿಗಳ ಮಾಹೇವಾರಿ ಪಟ್ಟಿಯನ್ನು

ಒಂದು ನಮೂನೆಯಲ್ಲಿ ಕಳುಹಿಸಿಕೊಡಬೇಕು. ಇದರಲ್ಲಿ ಸಾಮಾನು ಸಾಗಿಸುವವರ ಹೆಸರುಗಳನ್ನೂ ರಹದಾರಿಗಳ ನಂಬರುಗಳನ್ನೂ, ಅವು ಹುಟ್ಟಿದ ತಾರೀಖುಗಳನ್ನು, ಸಾಮಾನುಗಳನ್ನು ಯಾವ ಮಾರ್ಗವಾಗಿ ಸಾಗಿಸಬೇಕೆಂದು ಗೊತ್ತು ಮಾಡಲ್ಪಟ್ಟಿರುತ್ತದೆಯೋ ಆ ಮಾರ್ಗಗಳನ್ನೂ, ರಹದಾರಿಗಳಲ್ಲಿ ಎಷ್ಟು ಸಾಮಾನು ಸಾಗಿಸಿರುವದಾಗಿ ನಮೂದಿದೆಯೊ ಅದನ್ನೂ ಸಹ ನಮೂದಿಸಬೇಕು.

14. ಸರಕನ್ನು ಅಜಮಾಯಿಷಿ ಮಾಡುವ ಬಗ್ಗೆ ಮೇಲಿನ 10ನೆ ನಿಬಂಧನೆಯ ಮೇರೆಗೆ ಮೊಕರರ್ರಾಡಲ್ಪಟ್ಟ ಆಫೀಸರು, ಸರಕು ಯಾವ ಸ್ಥಳಕ್ಕೆ ಸೇರಬೇಕೊ ಆ ಸ್ಥಳಕ್ಕೆ ಸೇರಿದ ತರುವಾಯ ಅದು ಸರಿಯಾಗಿದೆಯೇ ಇಲ್ಲವೇ ಎಂದು ತಾಳೆ ನೋಡಬೇಕು. ಪ್ರತಿಯೊಂದು ಮೂಟೆಯನ್ನೂ ಬಿಚ್ಚುವುದಕ್ಕೆ ಮೊದಲೇ ಅದರ ಮೊಹರುಗಳೂ ತೂಕವೂ ಸರಿಯಾಗಿವೆಯೇ ಎಂದು ಪರೀಕ್ಷಿಸಿ ನೋಡಿ ತರುವಾಯ ಮೂಟೆಯನ್ನು ಬಿಚ್ಚಿನೋಡಿ ಅದರಲ್ಲಿರುವ ಸಾಮಾನಿನ ಸ್ವಭಾವವೂ ತೂಕವೂ ಅಪ್ಪಣೆ ಚೀಟಿಯಲ್ಲಿ ನಮೂದಿರುವ ಮೇರೆಗೆ ಕರಾರ್ವಾಕಾ ಇದೆ ಎಂಬುವುದನ್ನು ದೃಢಪಡಿಸಿಕೊಂಡು ಸದರಿ ಸಂಗತಿಯನ್ನು ಕುರಿತು ರಹದಾರಿಯ ಅಸಲು ಮತ್ತು ದ್ವಿಪ್ರತಿಗಳ ಹಿಂಭಾಗದಲ್ಲಿ ನಮೂದುಮಾಡಿ ಅಸಲು ರಹದಾರಿಯನ್ನು ಸಾಮಾನು ಸಾಗಿಸುವವನಿಗೆ ವಾಪಸುಮಾಡಿ, ದ್ವಿಪ್ರತಿಯನ್ನು ಸದರಿ ಸಾಮಾನು ಯಾವ ರೇಂಜಿನ ಮೂಲಕ ಸಾಗಿಸಿಕೊಂಡು ಬರೋಣವಾಯಿತೊ ಆ ರೇಂಜಿನ ಎಕ್ಸೈಜ್ ಇನ್‌ಸ್ಪೆಕ್ಟರಿಗೆ ರಹದಾರಿ ಕಳುಹಿಸಿದ ಆಫೀಸರಿಗೆ ರವಾನಿಸತಕ್ಕ ಬಗ್ಗೆ ಕಳುಹಿಸಿಕೊಡಬೇಕು.

15. ಕೇಕದಾರರ ದರ್ಜೆಗೆ ಕಮ್ಮಿಯಿಲ್ಲದ ಯಾವ ಲ್ಯಾಂಡ್ ರೆವಿನ್ಯೂ ಆಫೀಸರೇ ಆಗಲಿ, ಸಬ್ ಇನ್‌ಸ್ಪೆಕ್ಟರ ದರ್ಜೆಗೆ ಕಮ್ಮಿಯಿಲ್ಲದ ಯಾವ ಎಕ್ಸೈಜ್ ಆಫೀಸರೇ ಆಗಲಿ, ದಫೇದಾರನ ದರ್ಜೆಗೆ ಕಮ್ಮಿ ಇಲ್ಲದ ಯಾವ ಪೋಲೀಸು ಆಫೀಸರೇ ಆಗಲಿ, ಮೈಸೂರು ಸೀಮೆಯೊಳಗೆ ಸಾಗಿಸಿಕೊಂಡು ಹೋಗುವ ಯಾವ ಸರಕನ್ನಾಗಲಿ ಪರೀಕ್ಷಿಸಿ ನೋಡಬಹುದು; ಮತ್ತು ಹಾಗೆ ಪರೀಕ್ಷಿಸಿ ನೋಡಿದ್ದಾಗ್ಯೆ ಸದರಿ ಮೂಟೆಗಳೂ ಮೊಹರುಗಳೂ ಇರುವ ಸ್ಥಿತಿಯನ್ನು ಕುರಿತು ರಹದಾರಿಗಳ ಹಿಂಭಾಗದಲ್ಲಿ ಬರೆಯತಕ್ಕದ್ದು.

16. ಈ ರೆಗ್ಯುಲೇಷನುಗಳಿಗೆ ವಿರೋಧವಾಗಿ ಅಫೀಮನ್ನಾಗಲಿ ಮಾದಕ ವಸ್ತುಗಳನ್ನಾಗಲಿ ಸಾಗಿಸಿಕೊಂಡು ಹೋಗುತ್ತಿರುವುದಾಗಿ ಕಂಡು ಹಿಡಿಯಲ್ಪಟ್ಟ ಯಾವ ಮನುಷ್ಯನ ಮೇಲಾದರೂ ಓಪಯಮ್ ಆಕ್ಟಿನ 9ನೆ ಪ್ರಕರಣದ ಮೇರೆಗೆ ಕ್ರಮ ಜರಗಿಸತಕ್ಕದ್ದು.

17. ಈ ರೆಗ್ಯುಲೇಷನುಗಳ ವಿಧಿಗಳನ್ನು ಅತಿಕ್ರಮಿಸಿ ನಡೆದಿರುವುದಾಗಿ ಕಂಡು ಹಿಡಿಯಲ್ಪಟ್ಟ ಯಾವ ಮನುಷ್ಯನನ್ನೂ ಈ ಬಗ್ಗೆ ಕೊಡಲ್ಪಟ್ಟ ರಹದಾರಿಯ ಮೇರೆಗೆ ಮೈಸೂರು ಸೀಮೆಯಲ್ಲಿ ಸಾಮಾನುಗಳನ್ನು ಸಾಗಿಸಿಕೊಂಡು ಹೋಗುವುದಕ್ಕೆ ಬಿಡಕೂಡದು. ಹಾಗೆ ತಪ್ಪಿತ ನಡೆಸಿದ್ದನ್ನು ಯಾವ ಅಧಿಕಾರಿಯು ಕಂಡು ಹಿಡಿಯುತ್ತಾನೊ ಆ ಅಧಿಕಾರಿಯು ಆಯಾ ಡಿಸ್ಟ್ರಿಕ್ಟಿನ ಎಕ್ಸೈಜ್ ಡಿವಿಜನಲ್ ಅಧಿಕಾರಿಗೆ ಸದರಿ ತಪ್ಪಿತಸ್ಥನ ಹೆಸರನ್ನು ತಿಳಿಸತಕ್ಕದ್ದು; ಸದರಿ ಡಿವಿಜನಲ್ ಅಧಿಕಾರಿಯು, ಅಫೀಮು ಅಥವಾ ಮಾದಕ ವಸ್ತುವು ಯಾವ ಸೀಮೆಯಿಂದ ಸಾಗಿಸಿಕೊಂಡು ತರಲ್ಪಟ್ಟಿತೋ ಆ ಸೀಮೆಯ ಎಕ್ಸೈಜ್ ಮುಖ್ಯಾಧಿಕಾರಿಗೆ ತಿಳಿಸಿ ತನ್ಮೂಲಕ, ರಹದಾರಿಗಳನ್ನು ಕೊಡುವ ಅಧಿಕಾರಿಗಳಿಗೆಲ್ಲಾ ಸದರಿ ತಪ್ಪಿತಸ್ಥನ ಹೆಸರನ್ನು ತಿಳಿಸುವಂತೆ ಏರ್ಪಾಟು ಮಾಡಬೇಕು. ಆ ತರುವಾಯ ಅಂಥಾ ಮನುಷ್ಯನು ಅಫೀಮು ಅಥವಾ ಮಾದಕ ವಸ್ತುವನ್ನು ರಹದಾರಿ ಹೊಂದಿ ಸಾಗಿಸಿದರೂಕೂಡ ಅಂಥಾ ಸರಕನ್ನು ಹಿಡಿದು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಬಹುದು.

ತಾರೀಖು 29ನೆ ಏಪ್ರೆಲ್ 1909.

ನಂ. ರೆ. 9018—ಫಾರೆಸ್ಟು 172-08-2, 1900ನೆ ಇಸವಿ XIನೆ ನಂಬರು ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನಿನ 4ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಇದರಡಿ ಷೆಡ್ಯೂಲ್‌ನಲ್ಲಿ ವಿವರಿಸಿರುವ ಚಕ್ಕು ಬಂದಿಯುಳ್ಳ ಪ್ರದೇಶವನ್ನು ಸದರಿ ರೆಗ್ಯುಲೇಷನಿನ ನಿಯಮಗಳಿಗೊಳಪಟ್ಟಿರುವ ಒಂದು ಸ್ಟೇಟ್ ಫಾರೆಸ್ಟಾಗಿ ಏರ್ಪಡಿಸಬೇಕೆಂದು ಮೈಸೂರು ಶ್ರೀಮನ್ ಮಹಾರಾಜರವರ ಸರಕಾರದವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕು ಬಂದಿ.
ಚಿತ್ರದುರ್ಗ ಮತ್ತು ಶಿವಮೊಗ್ಗಾ.	ಹೊಳಲ್ಕೆರೆ ಮತ್ತು ಚನ್ನಗಿರಿ.	8,577 ಎಕರೆಗಳು ಅಥವಾ 13¾ ಚದರ ಮೈಲಿ.	ತುಪ್ಪದಹೊಳೆ ಜಂಗಲಿ.	ಸ್ಥಳ.—ಹೊಳಲಕೆರೆ ರೈಲ್ವೆ ಸ್ಟೇಷನ್‌ನಿಂದ ನೈರುತ್ಯಕ್ಕೆ ಸುಮಾರು 10 ಮೈಲಿಗಳ ದೂರದಲ್ಲಿ, ಶಿವಮೊಗ್ಗಾ, ಚಿತ್ರದುರ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಮುಕ್ಕುಪ್ಪೆ ಸರಹದ್ದಿನಲ್ಲಿರುವ ಜಂಗಲಿ ಪ್ರದೇಶ. ಚಕ್ಕು ಬಂದಿ. ಉತ್ತರಕ್ಕೆ—ಶಿವಮೊಗ್ಗಾ ಡಿಸ್ಟ್ರಿಕ್ಟು ಚನ್ನಗಿರಿ ತಾಲ್ಲೂಕು ಮರವಂಜಿ ಗ್ರಾಮದ ಸರ್ವೆ 58ನೆ ನಂಬರಿನ ನೈರುತ್ಯ ಮೂಲೆಯಿಂದ ಹೊರಟು ಎಲ್ಲೆ ಕುದ್ಧ ಪೂರ್ವಕ್ಕೆ ಸದರಿ ಸರ್ವೆ ನಂಬರಿನ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ. ತರುವಾಯ ಮಲಿಹಾಳ ಗ್ರಾಮದ ಸರ್ವೆ 44ನೆ ನಂಬರಿನ ಆಗ್ನೇಯ, ನೈರುತ್ಯ ಮತ್ತು ದಕ್ಷಿಣ ಮಾರ್ಗವಾಗಿ ಸರ್ವೆ 42ನೆ ನಂಬರಿನ

ವಾಯವ್ಯ ಮೂಲೆಗೆ ಕೇರುತ್ತದೆ, ನಂತರ ಸರ್ವೆ 42 ಮತ್ತು 41ನೆ ನಂಬರುಗಳ ಪಶ್ಚಿಮ ಮಾರ್ಗವಾಗಿ ಹೊರಟು 41ನೆ ಸರ್ವೆ ನಂಬರಿನ ನೈರುತ್ಯ ಮೂಲೆಯನ್ನು ಮುಟ್ಟುತ್ತದೆ, ನಂತರ ಪೂರ್ವಕ್ಕೆ ಹೊರಟು ಸದರಿ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ, ತರುವಾಯ ಸರ್ವೆ 39 ಮತ್ತು 36ನೆ ನಂಬರಿನ ಪಶ್ಚಿಮ ಮಾರ್ಗವಾಗಿ 36ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ಸದರಿ ಸರ್ವೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಸರ್ವೆ 35ನೆ ನಂಬರು ದಕ್ಷಿಣ ಮಾರ್ಗವಾಗಿ ಹೊರಟು ಸರ್ವೆ 32ನೆ ನಂಬರಿನ ವಾಯವ್ಯ ಮೂಲೆಯಿಂದ ಸುಮಾರು 50 ಗಜಗಳ ದೂರದಲ್ಲಿ ಅದರ ಪಶ್ಚಿಮ ದಿಕ್ಕಿನಲ್ಲಿ ಬಂದು ಸ್ಥಳಕ್ಕೆ ಸೇರುತ್ತದೆ. ತರುವಾಯ ಸದರಿ ಸರ್ವೆ ನಂಬರಿನ ಪಶ್ಚಿಮ ಮಾರ್ಗವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ. ನಂತರ ಅದರ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಉತ್ತರ ದಿಕ್ಕಿಗೆ ಸದರಿ ನಂಬರಿನ ಪೂರ್ವ ಮಾರ್ಗವಾಗಿ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಪೂರ್ವ ದಿಕ್ಕಿನಲ್ಲಿ ಹೊರಟು ಸರ್ವೆ 33ನೆ ನಂಬರಿನ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಉತ್ತರಾಭಿಮುಖವಾಗಿ ಸದರೀ ನಂಬರಿನ ಗಡಿಯಲ್ಲಿ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಸರ್ವೆ 34ನೆ ನಂಬರಿನ ಪೂರ್ವ ಮಾರ್ಗವಾಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಈಶಾನ್ಯ ದಿಕ್ಕಿಗೆ ಸರ್ವೆ 26ನೆ ನಂಬರಿನ ದಕ್ಷಿಣ ಮಾರ್ಗವಾಗಿ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಪೆನ್ನಸಮುದ್ರ ಗ್ರಾಮದ ಸರ್ವೆ 38ನೆ ನಂಬರಿನ ಈಶಾನ್ಯ ಮಾರ್ಗವಾಗಿ ಸುಮಾರು 6 ಫರಲಾಂಗು ದೂರ ಪ್ರವೇಶಿಸಿ ಸದರಿ ಗ್ರಾಮದ ಸರ್ವೆ 39ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಅದೇ ಮಾರ್ಗವಾಗಿ ಸರ್ವೆ 37ನೆ ನಂಬರಿನಲ್ಲಿ ಸುಮಾರು 6 ಫರಲಾಂಗು ದೂರ ಪ್ರವೇಶಿಸಿ ಸರ್ವೆ 36ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಉತ್ತರಾಭಿಮುಖವಾಗಿ ಸರ್ವೆ ನಂಬರ್ 36, 35 ಮತ್ತು 34ರ ಪೂರ್ವ ಸರಹದ್ದನ್ನನುಸರಿಸಿ ಆಖ್ಯೈರ ಸರ್ವೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಪೂರ್ವಕ್ಕೆ ಸರ್ವೆ ನಂಬರ್ 33ರ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ಪುನಹ ಅದೇ ಮಾರ್ಗವಾಗಿ ಹೊರಟು ಸರ್ವೆ 37ನೆ ನಂಬರನ್ನು ಪ್ರವೇಶಿಸಿ ಸುಮಾರು $2\frac{1}{2}$ ಫರಲಾಂಗು ದೂರದಲ್ಲಿ ಮೇಲೆ [ನಮೂದಿಸಿರುವ ತಾಲ್ಲೂಕಿನ ಬೆಟ್ಟಕಡೂರು ಗ್ರಾಮದ ಸರ್ವೆ 22ನೆ ನಂಬರಿನ ನೈರುತ್ಯ ಮೂಲೆಯನ್ನು ಮುಟ್ಟುತ್ತದೆ, ತರುವಾಯ ಪೂರ್ವ ಮುಖವಾಗಿ ಸದರಿ ಸರ್ವೆ ನಂಬರಿನ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ.

ಪೂರ್ವಕ್ಕೆ.—ತರುವಾಯ ಸರ್ವೆ 21ನೆ ನಂಬರನ್ನು ಪ್ರವೇಶಿಸಿ ಸುಮಾರು 3 ಫರಲಾಂಗು ದೂರ ಹೋಗಿ ಸರ್ವೆ 17ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ಅದರ ಪಶ್ಚಿಮ ಮಾರ್ಗವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಸರ್ವೆ 21ನೆ ನಂಬರನ್ನು ಆಗ್ನೇಯ ಮಾರ್ಗವಾಗಿ ಪ್ರವೇಶಿಸಿ ಸುಮಾರು 2 ಫರಲಾಂಗು ದೂರ ಹೋಗಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಹೊಳಲಕೆರೆ ತಾಲ್ಲೂಕು ದೇವರ ಹೊಸಹಳ್ಳಿ ಸರ್ವೆ 36ನೆ ನಂಬರು ವಾಯವ್ಯ ಮೂಲೆಯನ್ನು ಸೇರುತ್ತದೆ, ತರುವಾಯ ದಕ್ಷಿಣಕ್ಕೆ ಸರ್ವೆ 36 ಮತ್ತು 32ನೆ ನಂಬರುಗಳ ಪಶ್ಚಿಮ ಮಾರ್ಗವಾಗಿ ಆಖ್ಯೈರು ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ಸರ್ವೆ 33ನೆ ನಂಬರಿನಲ್ಲಿ ಆಗ್ನೇಯ ಮಾರ್ಗವಾಗಿ ಸುಮಾರು $2\frac{1}{4}$ ಫರಲಾಂಗು ದೂರ ಹೋಗಿ ಅದೇ ತಾಲ್ಲೂಕು ತುಪ್ಪದಹಳ್ಳಿ ಸರ್ವೆ 107ನೆ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಸರ್ವೆ 107ನೆ ನಂಬರನ್ನು ಪ್ರವೇಶಿಸಿ ಸುಮಾರು 4 ಫರಲಾಂಗು ದೂರ ಹೋಗಿ ಸರ್ವೆ 10ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಪಶ್ಚಿಮ ದಿಕ್ಕಿಗೆ ಅದರ ಉತ್ತರ ಮಾರ್ಗವಾಗಿ ಅದರ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣಕ್ಕೆ ಸದರಿ ಸರ್ವೆ ನಂಬರಿನ ಪಶ್ಚಿಮ ಮಾರ್ಗವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ನೈರುತ್ಯಾಭಿಮುಖವಾಗಿ ಸರ್ವೆ 108ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ತರುವಾಯ ದಕ್ಷಿಣಕ್ಕೆ ಸರ್ವೆ 109ನೆ ನಂಬರಿನ ಪಶ್ಚಿಮ ಮಾರ್ಗವಾಗಿ ಸರ್ವೆ 98ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಪಶ್ಚಿಮ ದಿಕ್ಕಾಗಿ ಸರ್ವೆ 98 ಮತ್ತು 99ನೆ ನಂಬರಿನ ಉತ್ತರಾಭಿಮುಖವಾಗಿ ಆಖ್ಯೈರ್ ಸರ್ವೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣ ದಿಕ್ಕಾಗಿ ಅದೇ ಸರ್ವೆ ನಂಬರಿನ ಪಶ್ಚಿಮಾಭಿಮುಖವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಪೂರ್ವ ದಿಕ್ಕಾಗಿ ಅದರ ದಕ್ಷಿಣದಲ್ಲಿ ಸರ್ವೆ 100ನೆ ನಂಬರು ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣ ದಿಕ್ಕಾಗಿ ಸದರಿ ಸರ್ವೆ 100ನೆ ನಂಬರಿನ ಪಶ್ಚಿಮಾಭಿಮುಖವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ಪೂರ್ವ ದಿಕ್ಕಾಗಿ ಅದೇ ಸರ್ವೆ ನಂಬರಿನ ಮತ್ತು ಸರ್ವೆ 101 ಮತ್ತು 103ನೆ ನಂಬರುಗಳ ದಕ್ಷಿಣಾಭಿಮುಖವಾಗಿ ಸರ್ವೆ 88ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣ ದಿಕ್ಕಾಗಿ ಸದರಿ ಸರ್ವೆ ನಂಬರಿನ ಪಶ್ಚಿಮಾಭಿಮುಖವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ನೈರುತ್ಯಾಭಿಮುಖವಾಗಿ ಸದರಿ ಗ್ರಾಮದ ಸರ್ವೆ 33ನೆ ನಂಬರನ್ನು ಪ್ರವೇಶಿಸಿ ಸುಮಾರು 5 ಫರಲಾಂಗು ದೂರ ಹೋಗಿ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಹಾರಳಹಳ್ಳಿ ಸರ್ವೆ 16ನೆ ನಂಬರಿನ ಉತ್ತರ ದಿಕ್ಕಿನ ಮೂಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ.—ನಂತರ ಸರ್ವೆ 15ನೆ ನಂಬರಿಗೆ ಈಶಾನ್ಯವಿರುವ ಹರಳಹಳ್ಳಿ ಗ್ರಾಮದ ಪೂರ್ವ ಎಲ್ಲೆಯನ್ನನುಸರಿಸಿ ಸುಮಾರು $1\frac{1}{2}$ ಫರಲಾಂಗು ದೂರ ಉತ್ತರಾಭಿಮುಖವಾಗಿ ಹೊರಡುತ್ತದೆ, ನಂತರ ಪಶ್ಚಿಮಾಭಿಮುಖವಾಗಿ ಸದರಿ ಹರಲಹಳ್ಳಿ ಗ್ರಾಮದ ಸರ್ವೆ 15ನೆ ನಂಬರಿನ ಉತ್ತರ ದಿಕ್ಕಿನಲ್ಲಿ ಹೋಗಿ ಅದೇ ಸರ್ವೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣಾಭಿಮುಖವಾಗಿ ಸದರಿ ಸರ್ವೆ ನಂಬರಿನ ಪಶ್ಚಿಮ ಕಡೆ ಹೊರಟು ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ಪಶ್ಚಿಮಾಭಿಮುಖವಾಗಿ ಗೊಂದಿಹೊಸಹಳ್ಳಿ ಗ್ರಾಮದ ಸರ್ವೆ 24ನೆ ನಂಬರಿನಲ್ಲಿ $1\frac{1}{2}$ ಫರಲಾಂಗು ದೂರ ಹೋಗಿ ಸರ್ವೆ 23ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಹೊರಟು ಅದರ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ

ಆಗ್ನೇಯವಾಗಿ ಸರ್ವೆ 23, 22 ಮತ್ತು 21ನೆ ನಂಬರುಗಳ ಪಶ್ಚಿಮ ಕಡೆ ಹೊರಟು ಆಖೈರ್ ಸರ್ವೆ ನಂಬರಿನ ನೈರುತ್ಯ- ಮೂಲೆಯನ್ನು ಸೇರುತ್ತದೆ, ತರುವಾಯ ವಾಯವ್ಯವಾಗಿ ಸರ್ವೆ 27ನೆ ನಂಬರಿನ ಉತ್ತರ ಕಡೆ ಹೊರಟು ಅದರ ವಾಯವ್ಯ ಮೂಲೆಯನ್ನು ಸೇರುತ್ತದೆ, ತರುವಾಯ ವಾಯವ್ಯಾಭಿಮುಖವಾಗಿ ಸರ್ವೆ 26ನೆ ನಂಬರಿನ ಪೂರ್ವ ಕಡೆ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ವಾಯವ್ಯವಾಗಿ ಸರ್ವೆ 25ನೆ ನಂಬರನ್ನು ಪ್ರವೇಶಿಸಿ ಸುಮಾರು 3 ಫರಲಾಂಗು ದೂರ ಹೋಗಿ ಸದರಿ ತಾಲ್ಲೂಕು. ಗಂಗಗೊಂಡನಹಳ್ಳಿ ಗ್ರಾಮದ ಗಡಿಯನ್ನು ಛೇದಿಸಿಕೊಂಡು ಅದೇ ಗ್ರಾಮದ ಸರ್ವೆ 31ನೆ ನಂಬರನ್ನು ಪ್ರವೇಶಿಸಿ ಸುಮಾರು 2 ಫರಲಾಂಗು ದೂರ ಹೋಗಿ ಸದರಿ ಸರ್ವೆ ನಂಬರಿನ ಉತ್ತರ ದಿಕ್ಕಿನಲ್ಲಿರುವ 2 ಬಾಂದುಗಳನ್ನು ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಉತ್ತರ ದಿಕ್ಕಿನಲ್ಲಿ ಹೊರಟು ಸರ್ವೆ 30ನೆ ನಂಬರು ಈಶಾನ್ಯ ಮೂಲೆಯನ್ನು ಸೇರುತ್ತದೆ.

ಪಶ್ಚಿಮಕ್ಕೆ.—ತರುವಾಯ ವಾಯವ್ಯ ದಿಕ್ಕಿನಲ್ಲಿ ಹೊರಟು ಸರ್ವೆ 33ನೆ ನಂಬರಿನ ಪೂರ್ವ ಮಾರ್ಗವಾಗಿ ಅದರ ಈಶಾನ್ಯ ದಿಕ್ಕಿನ ಮೂಲೆಯನ್ನು ಸೇರುತ್ತದೆ, ನಂತರ ಅದೇ ಮಾರ್ಗವಾಗಿ ಬೇಡಗೊಂಡನಹಳ್ಳಿ ಸರ್ವೆ 4ನೆ ನಂಬರನ್ನು ಪ್ರವೇಶಿಸಿ ಸುಮಾರು $1\frac{1}{4}$ ಫರಲಾಂಗು ದೂರ ಹೋಗಿ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಉತ್ತರವಾಗಿ ಸರ್ವೆ 5ನೆ ನಂಬರಿನ ಪೂರ್ವಭಾಗದಲ್ಲಿ ಹೋಗಿ ಅದರ ಈಶಾನ್ಯ ಮೂಲೆಗೂ ಅಲ್ಲಿಂದ ಈಶಾನ್ಯವಾಗಿ ಹೊರಟು ಸರ್ವೆ 6ನೆ ನಂಬರಿನ ದಕ್ಷಿಣ ಭಾಗದಲ್ಲಿ ಹೋಗಿ ಅದರ ಆಗ್ನೇಯ ಮೂಲೆಗೂ ಅಲ್ಲಿಂದಾ ಸರ್ವೆ 6, 7, 8ನೆ ನಂಬರುಗಳ ಪೂರ್ವ ಕಡೆ ಹೋಗಿ ಸರ್ವೆ 8ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ. ತರುವಾಯ ವಾಯವ್ಯವಾಗಿ ಸರ್ವೆ 8, 9ನೆ ನಂಬರುಗಳ ಉತ್ತರ ಮಾರ್ಗವಾಗಿ ಹೊರಟು 9ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಸರ್ವೆ 10ನೆ ನಂಬರಿನ ಪೂರ್ವ ಭಾಗದಲ್ಲಿ ಹೋಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ಅಲ್ಲಿಂದ ಅದೇ ನಂಬರಿನ ದಕ್ಷಿಣ ಭಾಗದಲ್ಲಿ ಹೊರಟು ಅದರ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ಈಶಾನ್ಯ ದಿಕ್ಕಿಗಾಗಿ ಸರ್ವೆ 4ನೆ ನಂಬರನ್ನು ಪ್ರವೇಶಿಸಿ ಸುಮಾರು $3\frac{1}{2}$ ಫರಲಾಂಗು ದೂರ ಹೋಗಿ ವೋದಗೊಂಡನಹಳ್ಳಿ ಗ್ರಾಮದ ಸರ್ವೆ 63ನೆ ನಂಬರಿನ ಆಗ್ನೇಯ ದಿಕ್ಕಿಗೆ ಎದುರಾಗಿರುವ ಅದೇ ತಾಲ್ಲೂಕು ವೇದಗೊಂಡನಹಳ್ಳಿ ಗಡಿಯನ್ನು ಸೇರುತ್ತದೆ, ತರುವಾಯ ಈಶಾನ್ಯ ಮಾರ್ಗವಾಗಿ ಸರ್ವೆ 6ನೆ ನಂಬರನ್ನು ಪ್ರವೇಶಿಸಿ ಸುಮಾರು 100 ಗಜಗಳ ದೂರ ಹೋಗಿ ಸರ್ವೆ 63ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಹೊರಟು ಪೂರ್ವ ದಿಕ್ಕಿಗಾಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ವಾಯವ್ಯ ದಿಕ್ಕಿಗಾಗಿ ಸರ್ವೆ 63, 62, 61, 60, 59, 58 ಮತ್ತು 57ನೆ ನಂಬರುಗಳ ಉತ್ತರಾಭಿಮುಖವಾಗಿ ಆಖೈರ್ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ಉತ್ತರ ದಿಕ್ಕಿಗಾಗಿ ಸರ್ವೆ 6ನೆ ನಂಬರನ್ನು ಪ್ರವೇಶಿಸಿ ಸುಮಾರು 2 ಫರಲಾಂಗು ದೂರ ಹೋಗಿ ಮುರವಂಜಿ ಗ್ರಾಮದ ಸರ್ವೆ 59ನೆ ನಂಬರಿನ ದಕ್ಷಿಣ ದಿಕ್ಕಿನಲ್ಲಿರುವ ಎರಡು ಬಾಂದುಗಳ ನಡುವೆ ಸೇರುತ್ತದೆ, ನಂತರ ವಾಯವ್ಯಾಭಿಮುಖವಾಗಿ ಸರ್ವೆ 59ನೆ ನಂಬರನ್ನು ಪ್ರವೇಶಿಸಿ ಸುಮಾರು $3\frac{1}{2}$ ಫರಲಾಂಗು ದೂರ ಹೋಗಿ ಸರ್ವೆ 65ನೆ ನಂಬರಿನ ದಕ್ಷಿಣ ದಿಕ್ಕಿನ ಮೂಲೆಯನ್ನು ಸೇರುತ್ತದೆ, ತರುವಾಯ ಈಶಾನ್ಯ ದಿಕ್ಕಿಗಾಗಿ ಸರ್ವೆ 65ನೆ ನಂಬರಿನ ಪೂರ್ವಾಭಿಮುಖವಾಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಈಶಾನ್ಯ ದಿಕ್ಕಿಗಾಗಿ ಪುನಹ ಸರ್ವೆ 59ನೆ ನಂಬರನ್ನು ಪ್ರವೇಶಿಸಿ ಸುಮಾರು 3 ಫರಲಾಂಗು ದೂರ ಹೋಗಿ ಮೊದಲು ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮಂ॥ ಮಹಾರಾಜರವರ ಸರ್ಕಾರದವರು ಮೈಸೂರು ಸೀಮೆಯ ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರ್‌ರಾದ ಮೆ॥ ಎಂ. ಶ್ಯಾಮರಾವ್, ಎಂ.ಎ. ಯರವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಾಗಿ ಮೊಕರರ್ರಾಡಲೂ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಿಗೆ ಸರ್ಕಾರ್ ತರಫು ಕುಮ್ಮಕ್ಕುಮಾಡಲು ಹಾಜರಾಗುವಂತೆ ಮೊಕರರ್ರಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮಂ॥ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯೂಟಿ ಕಮಿಷನರನ್ನು ಫಾರೆಸ್ಟ್ ಸೆಟ್ಲಮೆಂಟ್ ಆಫಿಸರು ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 4ನೆ ಮೇ 1909.

ನಂ. ಲೆ. 9120—ಖ್ಯಾ. ಲೆ. 11-08—19, ಸನ 1894ನೆ ಪದ್ಧತಿ 7ನೆಯ ನಂಬರ ಆ್ಯಂಡ್ ಆಕ್ಟ್‌ನಿರ್ಬಂಧ ರೆಗ್ಯುಲೇಷನ್ 6ನೆಯ ಪ್ರಕರಣವನ್ನು ಸರಸಾರು ಇದರಿಂದ ಪ್ರಸಿದ್ಧ ಮಾಡುವುದೇನಂದರೆ :—ಕೆಳಗಿನ ವಿವರದ ರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಕಟ್ಟಿಮನೆಗಳು ಪಡ್ಡಕೆಲೆ ಬಳಿಗೆಗೆ ಸೇರಿದಲು ಅವಶ್ಯಕವಾದ್ದರಿಂದ ಮತ್ತು ಮೇಲ್ಕಂಡ ರೆಗ್ಯುಲೇಷನ್ 7 ಮತ್ತು 3 (೮) ಪ್ರಕರಣಗಳನ್ನನುಸರಿಸಿ ಮತ್ತು ಅವುಗಳು ಸರ್ವ ವಿಧಿಸಿ ಚಾರ್ಜ್‌ನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಇದರಿಂದ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮವು ಜರಿಗಲು ಅಧಿಕಾರ ಕೊಟ್ಟಿದೆ.

ತಾಲ್ಲೂಕು		ಜಮೀನಿನ ಸರ್ವೆ ನಂಬರು.	ಜಮೀನಿನ ಸರ್ವೆ ನಂಬರು.	ಜಮೀನಿನ ಹಿಡುವಳಿದಾರನ ಯಜಮಾನನ ಹೆಸರು.	ಚಿಕ್ಕಲೆ ಜಮೀನು.			ಪೈಕಿ ಕಟ್ಟಿಮನೆಗಳು ಪಡ್ಡಕೆಲೆ ಬಳಿಗೆಗೆ ಸೇರಿದಲು ಅವಶ್ಯಕವಾದ ಜಮೀನು.			ಚತುರ್ಗಡಿ.			
					ಎ.	ಗು.	ಚ.	ಎ.	ಗು.	ಚ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹೆಗ್ಗಡದೇವನಕೋಟೆ		254	ಬಂಗಾಯಿತು	0 13	...	0 13	1 8	0 13	1 8		ವ್ಯಾಸರಾವ್ ಪಾತ್ರೆ ಪಟೆಯ	ವ್ಯಾಸರಾವ್ ಪಾತ್ರೆ ನದಿ	ನದಿ	ನದಿ ಪಟೆಯ
	ವ್ಯಾಸರಾವ್ ...	255	ಪಟೆಯ	0 11	...	0 11	1 4	0 11	1 4		ಶ್ರೀನಿವಾಸರಾವ್ ಪಾತ್ರೆ	ನಾರಾಯಣರಾವ್ ನ ಗೌರೇರ ಪಾತ್ರೆ.	ಶ್ರೀನಿವಾಸರಾವ್ ಪಾತ್ರೆ	ಮುಂಗಾರಿನ ಪಾತ್ರೆ.
	ನಂಜುಂಡರಾವ ವಗೈರೆ.	259	ತಾ ...	1 35	...	1 35	11 0	1 13	...			ಪಿಂಜಾರ್‌ಗಳು ವಗೈರೆ ರೈರ ಪಾತ್ರೆ.	ನದಿ	ನದಿ
	ಶ್ರೀನಿವರಾವ್ ...	260	ಪಟೆಯ	4 6	10	3 36	24 0	3 36	24 0		ಪಡ್ಡಕೆಲೆ ಅಂಗಳ			
								5 33						
ಸಾರಾಯಣರಾವ್ ...		58	ಬಂಗಾಯಿತು	0 15	...	0 15	2 4	0 15	2 4		ಪಟೆಯ	ರಾಮಯ್ಯಾರ್ ಪಾತ್ರೆ	ಪಟೆಯ	ಪಟೆಯ
ಸೋಣಾರ ರಾಮಯ್ಯರ್.		59	ಪಟೆಯ	0 23	...	0 23	3 8	0 23	3 8		ನಾರಾಯಣರಾವ್ ನ ಗೌರೇರ ಪಾತ್ರೆ.	ವ್ಯಾಸರಾವ್ ಪಾತ್ರೆ	ಪಟೆಯ	ಪಟೆಯ
ವ್ಯಾಸರಾವ್ ...		60	ಪಟೆಯ	0 20	...	0 20	3 0	0 20	3 0		ರಾಮಯ್ಯಾರ್ ಪಾತ್ರೆ	ಪಟೆಯ	ಪಟೆಯ	ಪಟೆಯ
	...	61	ಪಟೆಯ	0 5	...	0 5	0 12	0 5	0 12		ವ್ಯಾಸರಾವ್ ಪಾತ್ರೆ	ಪಟೆಯ	ಪಟೆಯ	ಪಟೆಯ
	...	62	ಪಟೆಯ	0 18	...	0 18	2 12	0 18	2 12		ಪಟೆಯ	ಪಟೆಯ	ಪಟೆಯ	ಪಟೆಯ
	...	63	ಪಟೆಯ	0 19	...	0 19	2 12	0 19	2 12		ಪಟೆಯ	ಪಟೆಯ	ಪಟೆಯ	ಪಟೆಯ
								2 20						
							ಒಟ್ಟಾಗಿ	8 13						

ತಾರೀಖು 12ನೆ ಮೇ 1909.

ನಂ. ರೆ. 9399—ಲ್ಯಾ. ರೆ. 115—07—97, ಸ್ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, 3ನೆ ಮಹಾರಾಜ ಕುಮಾರಿಯವರ ಮ್ಯಾರೇಜ್ ಗೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜ಼ನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ತಿಪ್ಪೂರು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಂಬರ್.	ಖುಷ್ಕಿ, ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
													ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ಕಸಬಾ ಮೈಸೂರು	ಪಡುವಾರಹಳ್ಳಿ	ಚಾಮಯ್ಯನ ಪುಟ್ಟಿಗೌಡನ ಮಗ ಚಿಕ್ಕ ಪುಟ್ಟಿಗೌಡ.	47	ಖುಷ್ಕಿ	ಎ. ಗು. 4 5	ಗು. 17	ಎ. ಗು. 3 28	ರೂ. 4	ಎ. ಗು. 1 20	ರೂ. 1	ಸವಾರು ಲೈನಿಗೆ ತೆಗದುಕೊಂಡ ಸರ್ವೆ 48ನೆ ನಂಬರು ಖರಾಬು.	ಸವಾರು ಲೈನಿಗೆ ತೆಗದುಕೊಂಡಿರುವ 45ನೆ ನಂಬರು ಜಮೀನು.	ನೀರು ಹರಿಯುವ ಹಳ್ಳ.	ಕಾಳಿಗೌಡನ ಮಗ ಮಾದೈಯ್ಯನ ಸರ್ವೆ 41ನೆ ನಂಬರು ಜಮೀನು ಮತ್ತು ನೀರು ಹರಿಯುವ ಹಳ್ಳ.
				ಚಾಮಯ್ಯನ ಪುಟ್ಟಿಗೌಡನ ಮಗ ಚಿಕ್ಕ ಪುಟ್ಟಿಗೌಡ.	40	ಖುಷ್ಕಿ	ಎ. ಗು. 1 20			ರೂ. 1	ಎ. ಪೈ. 0 10		ಮುದ್ದು, ಹೊಂಬಾಳೆ, ನಂಜ, ಕಪನಿ ದಗ್ಗೆರೆ ಸರ್ವೆ 40ನೆ ನಂಬರು ಹೂಲ ಮತ್ತು 39ನೆ ನಂಬರು ಜಮೀನು.	15 ಗುಂಟೆ.	ಎ. ಪೈ. 6 3	ಸರ್ವೆ 36ನೆ ನಂಬರು ಕೆಂಪಿಬೋರನ ಹೂಲ.	ಸವಾರು ಲೈನಿಗೆ ತೆಗದುಕೊಂಡ ಸರ್ವೆ 45-46ನೆ ನಂಬರು ಖರಾಬು.	ಕಾಳಿಗೌಡನ ಮಗ ಮಾದೈಯ್ಯನ 41ನೆ ನಂಬರು ಹೂಲ ಮತ್ತು ಸವಾರಲೈನಿಗೆ ತೆಗದುಕೊಂಡು ಇರುವ 43ನೆ ನಂಬರ ಜಮೀನು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

ಮಿಲಿಟರಿ.

ಇನ್ಸ್ಟ್ರುಹಾರ್ನಾಮೆ.

ತಾರೀಖು 8ನೆ ಮೇ 1909.

ನಂ. ಮಿಲಿಟರಿ 1071-2—174-08-3, ಘನವನ್ನು ಹೊಂದಿದ ಶ್ರೀಮ್ಮ ಮಹಿಸೂರು ಸೀಮೆಯ ಮಹಾರಾಜರವರು ಲೋಕಲ್ ಸರ್ವಿಸ್ ರೆಜಿಮೆಂಟ್ 4ನೆ ಗ್ರೇಡ್ ಜಮಾದಾರ್ ಗೋಪಾಲರಾಯರನ್ನು ಘನವನ್ನು ಹೊಂದಿದ ಶ್ರೀಮ್ಮ ಮಹಾರಾಜರವರ ಬಾಡಿಗಾರ್ಡ್‌ಗೆ ವರ್ಗಾಯಿಸಿರುತ್ತಾರೆ. ಮತ್ತು ಲೋಕಲ್ ಸರ್ವಿಸ್ ರೆಜಿಮೆಂಟ್ ದಫೇದಾರ್ ಸುಬ್ಬರಾವ್ ಜವ್ಮಿ ಯವರನ್ನು ಅದೇ ರೆಜಿಮೆಂಟಿನಲ್ಲಿ 4ನೆ ಗ್ರೇಡ್ ಜಮಾದಾರ್‌ರಾಗಿ ಬಡ್ತಿ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟರಿ.